# SY-516

Reg. No. : ......................................

Name : ..........................................

**SECOND YEAR HIGHER SECONDARY EXAMINATION, MARCH – 2024**

Part – III

**KANNADA (Optional)**

Maximum : 80 Scores

Time : **2½** Hours

Cool-off time : **15** Minutes

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. 'ಶ್ರೀಮತಿ ಸ್ವಯಂವರ' ಪಾಠದಲ್ಲಿ ಬರುವ ಶ್ರೀಮತಿಯ ತಂದೆಯ ಹೆಸರೇನು ?

   (ನಾರದ, ಮಾಂಧಾತೃ, ಅಂಬರೀಷ, ಪರ್ವತ)

2. ಒಬ್ಬರ ಜೀವನದ ಕುರಿತು ಇನ್ನೊಬ್ಬರು ನಿರೂಪಿಸುವುದು–

   (ಆತ್ಮಕಥೆ, ಜೀವನಚರಿತ್ರೆ, ಪ್ರಬಂಧ, ವಿಮರ್ಶೆ)

3. ಪಂಚದ್ರಾವಿಡ ಭಾಷೆಗೆ ಸೇರದ ಭಾಷೆಯನ್ನು ಗುರುತಿಸಿರಿ.

   (ಕನ್ನಡ, ಮಲೆಯಾಳ, ತಮಿಳು, ಬಂಗಾಳಿ)

4. "ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕ" ಯಾವುದು ?

   (ಪಾರಸಿಕರು, ಪ್ರತಾಪ ರುದ್ರದೇವ, ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ, ಟೊಳ್ಳುಗಟ್ಟಿ)

**5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4 × 1 = 4)**

5. ದೇವಾಲಯ – ಈ ಪದವನ್ನು ವಿಂಗಡಿಸಿ ಬರೆಯಿರಿ.

6. ಯಶ – ಈ ಪದದ ತದ್ಭವ ರೂಪವನ್ನು ಹೆಸರಿಸಿರಿ.

7. ಸಾಯಕ – ಈ ಪದದ ಅರ್ಥವನ್ನು ಬರೆಯಿರಿ.

8. ಆಟವಾಡುವಾಗ ಕಾಲಿಗೆ ಬಿದ್ದ ಬೆಂಚಿನಿಂದ ಶೇಖರನಿಗೆ ನೋವಾಯಿತು. – ಈ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದವನ್ನು ಗುರುತಿಸಿ ಬರೆಯಿರಿ.

9. ಕಣ್ದೆರೆ – ಈ ಪದವನ್ನು ವಿಗ್ರಹಿಸಿ ಬರೆಯಿರಿ.

10. ತುಳುನಾಡಿನಲ್ಲಿ ಅನೇಕ ತುಳುವರಸರು ರಾಜ್ಯವಾಳಿದ್ದರು. – ಅಡಿಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿರಿ.

**11 ರಿಂದ 16 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5 × 2 = 10)**

11. ವೃದ್ಧ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

12. ಕೊಡು, ತೋರು – ಈ ಪದಗಳ ನಿಷೇಧಾರ್ಥ ರೂಪಗಳನ್ನು ಬರೆಯಿರಿ.

13. 'ಗಾರ' ಪ್ರತ್ಯಯವಿರುವ ಎರಡು ತದ್ಧಿತಾಂತ ಪದಗಳನ್ನು ಬರೆಯಿರಿ.

14. ಪ್ರವಾಸಿ ಕೇಂದ್ರಗಳ ಸ್ವಚ್ಛತೆಯನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

15. ಮನದಟ್ಟಾಗು – ಈ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ತಯಾರಿಸಿರಿ.

16. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.
    ಈ ಬೆಟ್ಟದಲ್ಲಿ ಬೆಳೆದ ಬೆಳೆಯನ್ನು ಹೊತ್ತು ಸಾಗಿಸುವುದು ಕಷ್ಟವಾದುದರಿಂದ ತಮಿಳರು ಇಲ್ಲಿ ಕುದುರೆಯನ್ನು ಇಟ್ಟುಕೊಂಡಿರುತ್ತಾರೆ.

**17 ರಿಂದ 21 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4 × 3 = 12)**

17. ಕೆಳಗೆ ನೀಡಲಾದ ಹಳೆಗನ್ನಡ ವಾಕ್ಯವನ್ನು ಹೊಸಗನ್ನಡ ರೂಪಕ್ಕೆ ಪರಿವರ್ತಿಸಿ ಬರೆಯಿರಿ.
    ಆಗಳ್ ಸಭಾಸದರೆಲ್ಲಮೆವೆಮಿಡುಕದೆ ಪಂದೆಯಂ ಪಾವಡರ್ದವೊಲುಸಿರದಿರೆ ನಾರಾಯಣಂ ಶಿಶುಪಾಲನನಿಂತೆಂದಂ

18. ಸರಿಹೊಂದಿಸಿ ಬರೆಯಿರಿ.

| ಅ | ಆ |
|---|---|
| ಪಂಪ | ಶ್ರೀಮತಿ ಸ್ವಯಂವರ |
| ಮುದ್ದಣ | ಇಳೆಯಾಂಡ ಗುಡಿಮಾರ |
| ಹರಿಹರ | ಸಲಿಸುವೆಂ ನೂರುವರಂ |

19. ಕೆಳಗೆ ನೀಡಲಾದ ಪದ್ಯದ ಆಶಯವನ್ನು ಬರೆಯಿರಿ.

ಮನಸಿಜ ಕೇಳಣ್ಣ ನಿನಗೆನಗಿಂದು ದು
ರ್ಮನದಿಂದ ಜಗಳವಪ್ಪುದಕೆ
ಘನವೇನು ಹೇಳು ನಿಷ್ಕಾರಣ ಕದನವ
ಜನಪರೆಸಗುವರೆಯೆಂದಾ

20. 'ಮಂಥರಾ' ನಾಟಕದಲ್ಲಿ ಬಂದಿರುವ ಕೆಳಗಿನ ಸಂಭಾಷಣೆಯ ಸಂದರ್ಭವನ್ನು ತಿಳಿಸಿರಿ.

ಬೆಳಗಾಗ್ತಾ ಬೆಳಗಾಗ್ತಾ
ಬಂಗಾರದಂಥ ಸುದ್ದಿ ತಿಳೀತು !

21. 'ಅಡ್ಕ' ಪದದಿಂದ ಕೊನೆಗೊಳ್ಳುವ ಮೂರು ಸ್ಥಳನಾಮಗಳನ್ನು ಬರೆಯಿರಿ.

**22 ರಿಂದ 26 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. (4 × 4 = 16)**

22. ಕೆಳಗೆ ನೀಡಲಾದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣವಿಭಜನೆ ಮಾಡಿ ಛಂದಸ್ಸನ್ನು ಹೆಸರಿಸಿರಿ.

ಸರ್ವಜನಮರಿಯದಂತೀವುದೀ ಪತ್ರಿಕೆಯ
ನುರ್ವರೆಯೊಳಾವೆಸಗಿದತಿಶಯದ ಮಾಳ್ಕೆ ನ
ಮ್ಮಿರ್ವರೊಳ್ ಗುಪ್ತಮಾಗಿರಲೆಂದು ಕೊಟ್ಟನಾ ಮಂತ್ರಿ ತಲ್ಲೇಖನವನು

23. ತುಳು ಭಾಷೆಯ ಪ್ರಾಚೀನತೆಯನ್ನು ಲೇಖಕರು ಹೇಗೆ ಗುರುತಿಸಿದ್ದಾರೆ ? ವಿಷದಪಡಿಸಿರಿ.

24. ಧ್ವನಿ ವ್ಯತ್ಯಾಸ ಎಂದರೇನು ? ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿರಿ.

25. ನಿಮ್ಮೂರಿನ ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಒದಗಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಯವರಿಗೆ ಸಮರ್ಪಿಸಲು ಮನವಿಪತ್ರವೊಂದನ್ನು ಸಿದ್ಧಪಡಿಸಿರಿ.

26. ಕೆಳಗೆ ನೀಡಲಾದ ಅನುಪಮಾ ನಿರಂಜನ ಅವರ ಆತ್ಮಕಥೆಯ ಭಾಗವನ್ನು ಜೀವನಚರಿತ್ರೆಯಾಗಿ ಪರಿವರ್ತಿಸಿ ಬರೆಯಿರಿ.

ನನ್ನ ಬರವಣಿಗೆ 1975 ರ ಹೊತ್ತಿಗೆ ಹೊಸ ತಿರುವು ಪಡೆಯಿತು. ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಶುರು ಮಾಡಿದೆ. ಬರವಣಿಗೆಯ ಗುಣಮಟ್ಟ ವೃದ್ಧಿಸಿಕೊಳ್ಳಲು ಹೊರಗಿನವರ್ಯಾರೂ ಸಹಾಯ ಮಾಡಲು ಸಾಧ್ಯವಿಲ್ಲ ; ಸ್ವಂತ ಪರಿಶ್ರಮದಿಂದ ಅದನ್ನು ಸಾಧಿಸಬೇಕು ಎಂಬುದನ್ನು ಕಂಡುಕೊಂಡೆ. ಅಧ್ಯಯನ ವ್ಯಾಪಕವಾಯಿತು. ಅದರಿಂದಲೇ ಒಂದು ರೀತಿಯ ಆತ್ಮವಿಶ್ವಾಸ ಬಂತು. ಮಾರ್ಕ್ಸ್ ಎಂಗೆಲ್ಸರ ಕೃತಿಗಳನ್ನು ನಿಷ್ಠೆಯಿಂದ ಅಭ್ಯಸಿಸಿದೆ.

**27 ರಿಂದ 30 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(3 × 6 = 18)**

27. ನಿಮ್ಮೂರಿನ ಕೃಷಿಭೂಮಿ ಹಾಗೂ ಕೃಷಿಕರ ಸಮಸ್ಯೆಗಳನ್ನು ವಿವರಿಸಿಕೊಂಡು ಲೇಖನವೊಂದನ್ನು ಸಿದ್ಧಪಡಿಸಿರಿ.

28. 'ಇಡ್ಲಿ' ಪದದ ವ್ಯುತ್ಪತ್ತಿ ಹಾಗೂ ವಿಕಾಸದ ಬಗ್ಗೆ ಪಾಠಭಾಗದ ಆಧಾರದಲ್ಲಿ ವಿವರಿಸಿ ಬರೆಯಿರಿ.

29. 'ತಾಳಿದವನು ಬಾಳಿಯಾನು' ಎಂಬ ಮಾತು ಶಿಶುಪಾಲನ ನಡತೆಗೆ ಅನ್ವಯಿಸುತ್ತದೆಯೇ ? ವಿಶದಪಡಿಸಿರಿ.

30. 'ಇಳೆಯಾಂಡಗುಡಿಮಾರ' ಪಾಠಭಾಗದ ಆಧಾರದಲ್ಲಿ ಇಳೆಯಾಂಡಗುಡಿಮಾರನ ಪಾತ್ರಚಿತ್ರಣ ಮಾಡಿರಿ.

**31 ರಿಂದ 33 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(2 × 8 = 16)**

31. ರಾಮನಿಗೆ ಯುವರಾಜ ಪಟ್ಟ ದೊರೆಯದಂತೆ ಮಾಡುವಲ್ಲಿ ಯಶಸ್ವಿಯಾದ ಮಂಥರೆಯ ಬುದ್ಧಿವಂತಿಕೆ 'ಮಂಥರಾ' ನಾಟಕದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

32. ನಾರದ ಮತ್ತು ಪರ್ವತರೆಂಬ ಮುನಿಗಳು ಒಬ್ಬರನ್ನೊಬ್ಬರು ವಂಚಿಸಿದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

33. 'ಉಲ್ಲಂಘಿಸುವರುಂಟೆ ವಿಧಿಕೃತವನು' ಪಾಠಭಾಗದ ಆಶಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.

---